ಎಂ. ಪಿ. ಇ. ಸೊಸೈಟಿಯ

# ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹೊನ್ನಾವರ, ಉತ್ತರಕನ್ನಡ

**ದಿನಾಂಕ 09-11-2023 ರಂದು ನಡೆದ ಐ.ಕ್ಯೂ.ಎ.ಸಿ. ಸಭೆಯಲ್ಲಿ ಚರ್ಚಿಸಿದ ವಿಷಯಗಳು:**

1. ಕಾಲೇಜಿನ ಪ್ರವೇಶದ್ವಾರದಲ್ಲಿ ಹೆಲ್ಪ್‌ಡೆಸ್ಕ್ ನಿರ್ಮಿಸಲು ಕೊಟೇಶನ್ ಪಡೆಯಲಾಗಿದ್ದು ಈ ಕುರಿತ ಕೆಲಸ ಸದ್ಯದಲ್ಲಿ ಆರಂಭವಾಗಲಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.
2. ರಸಾಯನಶಾಸ್ತ್ರ ಪ್ರಯೋಗಾಲಯ ಸೇರಿದಂತೆ ಕ್ಯಾಂಟೀನ್ ಕಟ್ಟಡವನ್ನು ವಿಸ್ತರಿಸಿ ನವೀಕರಿಸುವ ಯೋಜನೆಯನ್ನು ಫೆಬ್ರುವರಿ ಒಳಗೆ ಕಾರ್ಯಗತಗೊಳಿಸಲಾಗುವುದು ಹಾಗೂ ಕ್ಯಾಂಟೀನ್‌ನ ವ್ಯವಸ್ಥಾಪಕರನ್ನು ಬದಲಾಯಿಸುವ ವಿಚಾರವನ್ನು ಕಟ್ಟಡದ ಕೆಲಸ ಪೂರ್ಣಗೊಂಡ ನಂತರದಲ್ಲಿ ನಡೆಯುವ ಸಭೆಯಲ್ಲಿ ಚರ್ಚಿಸುವುದೆಂದು ನಿರ್ಣಯಿಸಲಾಯಿತು.
3. ಇಂಡೋರ್ ಸ್ಟೇಡಿಯಂ ಹೊರಭಾಗದಲ್ಲಿ ಕೆಲವು ವಿದ್ಯಾರ್ಥಿಗಳು ಆಡುವುದು ಹಾಗೂ ಗುಂಪಿನಲ್ಲಿ ಮಾತನಾಡುವುದರಿಂದ ಅಲ್ಲಿಗೆ ಸಮೀಪದ ತರಗತಿಗಳಿಗೆ ತೊಂದರೆಯಾಗುತ್ತಿರುವುದನ್ನು ವಿದ್ಯಾರ್ಥಿ ಪ್ರತಿನಿಧಿ ಸಭೆಗೆ ತಿಳಿಸಿದರು. ಈ ಕುರಿತಾಗಿ ಗಮನ ಹರಿಸಿ ತರಗತಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ದೈಹಿಕ ಶಿಕ್ಷಣ ಸಹಾಯಕ ನಿರ್ದೇಶಕರಿಗೆ ತಿಳಿಸಲಾಯಿತು.
4. ವಿದ್ಯಾರ್ಥಿ ಯೂನಿಯನ್ ಕಾರ್ಯವ್ಯಾಪ್ತಿ ಎಷ್ಟಿರಬೇಕು ಎನ್ನುವುದನ್ನು ಚರ್ಚಿಸಿ ಕಾರ್ಯವ್ಯಾಪ್ತಿಯನ್ನು ನಿಧಿಷ್ಟಪಡಿಸುವ ಜೊತೆಗೆ ವಿದ್ಯಾರ್ಥಿ ಪ್ರತಿನಿಧಿಗಳು/ಕಾರ್ಯದರ್ಶಿಗಳಿಗೆ ಅವರ ಕರ್ತವ್ಯ ಹಾಗೂ ಕಾರ್ಯವ್ಯಾಪ್ತಿಯ ಕುರಿತು ತಿಳಿಸಲು ಓರಿಯೆಂಟೇಶನ್ ಕೈಗೊಳ್ಳಲು ಸೂಚಿಸಲಾಯಿತು.
5. ಗ್ರಂಥಾಲಯದಿಂದ ಎರವಲು ಪಡೆದು ಪುಸ್ತಕಗಳನ್ನು ಹಿಂತಿರುಗಿಸದ ಕಾಲೇಜಿನ ಕೆಲವು ನಿವೃತ್ತ ನೌಕರರು ಹಾಗೂ ಕಾಲೇಜು ಬಿಟ್ಟಿರುವ ನೌಕರರು ಪುಸ್ತಕಗಳನ್ನು ಮುಂದಿನ ಐಕ್ಯುಎಸಿ ಸಭೆಯೊಳಗೆ ಹಿಂತಿರುಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಜರುಗಿಸಬೇಕು ಎಂದು ಗ್ರಂಥಪಾಲಕರಿಗೆ ಸೂಚಿಸಲಾಯಿತು.
6. ಶಿಕ್ಷಕರ ಕುರಿತು ವಿದ್ಯಾರ್ಥಿಗಳಿಂದ ಫೀಡ್‌ಬ್ಯಾಕ್ ಪಡೆಯಬೇಕು; ಶಿಕ್ಷಕರು ಕೈಗೊಳ್ಳುವ ಪ್ರಾಜೆಕ್ಟ್‌ನ ಪ್ರಸ್ತಾವನೆ ಸಿದ್ಧಪಡಿಸಿ ನಿಗದಿತ ಅವಧಿಯೊಳಗೆ ಆಡಳಿತ ಮಂಡಳಿಗೆ ನೀಡಬೇಕು; ಎಕ್ಯುಎರ್‌ಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯಿಂದ ಆನ್‌ಲೈನ್ ಮೂಲಕ ಫೀಡ್‌ಬ್ಯಾಕ್ ಪಡೆಯಬೇಕು; ಕರ್ನಾಟಕ ವಿಶ್ವವಿದ್ಯಾಲಯದ ವ್ಯವಸ್ಥೆಯಡಿಯಲ್ಲಿ ಉಂಟಾಗಿರುವ ಮೌಲ್ಯಮಾಪನ ಮತ್ತು ಇತರ ಶೈಕ್ಷಣಿಕ ಸಮಸ್ಯೆಗಳ ಕುರಿತು ಶಿಕ್ಷಕರು ಚರ್ಚಿಸಿ ಈ ಕುರಿತ ಸಮಸ್ಯೆಗಳನ್ನು ಲಿಖಿತವಾಗಿ ಅಧ್ಯಕ್ಷರು ಹಾಗೂ ಉಳಿದ ಸಂಬಂಧಪಟ್ಟವರಿಗೆ ನೀಡಬೇಕು ಹಾಗೂ ಓಇಸಿ ವಿಷಯ ಆಯ್ಕೆಯ ಕುರಿತಾದ

ಗೊಂದಲವನ್ನು ನಿವಾರಿಸಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು.

7. ಇಂಟರ್‌ನೆಟ್ ಸಂಪರ್ಕವುಳ್ಳ ಎರಡು ಕಂಪ್ಯೂಟರ್ ಹಾಗೂ ಪ್ರಿಂಟರ್ ಅನ್ನು ಜನರಲ್ ಸ್ಟಾಫ್‌ರೂಂ ಗೆ ಒದಗಿಸಲು, ಭೂಗೋಲಶಾಸ್ತ್ರ ವಿಭಾಗದ ಕೊಠಡಿಯಲ್ಲಿ ಹೊಸ ಬೋರ್ಡ್ ಅಳವಡಿಸಲು ಹಾಗೂ ದಿವ್ಯಾಂಗರಿಗೆ ವಿಶೇಷ ಶೌಚಾಲಯ ನಿರ್ಮಿಸಲು ನಿರ್ಣಯಿಸಲಾಯಿತು.

8. ಎಕ್ಯುಎಆರ್ 2022-23 ಅನ್ನು ನಿಗದಿತ ಅವಧಿಯೊಳಗೆ ಸಿದ್ಧಪಡಿಸಿ ಅಪಲೋಡ್ ಮಾಡುವ ನಿಟ್ಟಿನಲ್ಲಿ ಅಗತ್ಯಕ್ರಮ ಕೈಗೊಳ್ಳಲು ಸೂಚಿಸಲಾಯಿತು.

9. ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ವಿಚಾರಕ್ಕೆ ಅನುಮೋದನೆ ನೀಡಲಾಯಿತು. ದೈಹಿಕ ಶಿಕ್ಷಣ, ಸಂಗೀತ ಮೊದಲಾದ ವಿಷಯಗಳ ಕುರಿತು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬಹುದು ತಿಳಿಸಲಾಯಿತು.

10. ಕಾಲೇಜಿನ ಕುರಿತಂತೆ ಮಾಹಿತಿ/ಪ್ರಚಾರ ನೀಡಲು ಗ್ರಾಮ ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಯೋಜನೆ ಸಿದ್ಧವಾಗಿದ್ದು ಇದು ಕಾರ್ಯಗತಗೊಳ್ಳುವ ಹಂತದಲ್ಲಿದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

11. ಪ್ಲೇಸ್‌ಮೆಂಟ್ ಹೆಚ್ಚಿಸುವ ಸಂಬಂಧ ಕಾಲೇಜಿನಲ್ಲಿ ಕ್ಯಾಂಪಸ್ ಸಂದರ್ಶನಗಳನ್ನು ಹೆಚ್ಚಿಸುವುದು ಹಾಗೂ ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದಲ್ಲಿ ಉತ್ತೀರ್ಣರಾಗಲು ಅಗತ್ಯ ಕ್ರಮ ಜರುಗಿಸುವ ಕುರಿತಂತೆ ವಿಸ್ತ್ರತಚರ್ಚೆ ನಡೆಸಿ ಈ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸುವಂತೆ ಸಿಇಓ ಅವರಿಗೆ ತಿಳಿಸಲಾಯಿತು.

12. ಎನ್.ಎಸ್.ಎಸ್.,ಎನ್.ಸಿ.ಸಿ.,ರೋವರ್‌ರೇಂಜರ್ ಘಟಕಗಳಿಂದ ನಿರೀಕ್ಷಿಸಿದ ಕಾರ್ಯಗಳು ಹಾಗೂ 'ಎಕ್ಸ್ಟೆನ್ಶನ್ ಪ್ರೋಗ್ರಾಂ' ನಡೆಯುತ್ತಿಲ್ಲದಿರುವುದರಿಂದ ಇವುಗಳ ಕಾರ್ಯಚಟುವಟಿಕೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಘಟಕಗಳ ಸಂಯೋಜಕರ ಸಭೆಕರೆದು ಚರ್ಚಿಸುವಂತೆ ಐಕ್ಯುಎಸಿ ಸಂಚಾಲಕರಿಗೆ ತಿಳಿಸಲಾಯಿತು.

13. .ಕಾಲೇಜಿನ ವೆಬ್‌ಸೈಟ್ ಅಭಿವೃದ್ಧಿ ಪಡಿಸಲು ಕೊಟೇಶನ್ ಕರೆಯುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

ದಿನಾಂಕ: 26-02-2024
ಸ್ಥಳ: ಹೊನ್ನಾವರ

ಡಾ.ಸುರೇಶ್‌ಎಸ್.
ಸಂಯೋಜಕರು

ಡಾ. ರೇಣುಕಾದೇವಿ ಗೋಳಿಕಟ್ಟೆ
ಪ್ರಾಚಾರ್ಯರು

ಶ್ರೀ ಕೃಷ್ಣಮೂರ್ತಿ ಭಟ್ಟ
ಅಧ್ಯಕ್ಷರು